ದಿನಗಟ್ಟಲೆ ಹಾಡುತ್ತಾಳೆಂಬುದು ನನಗೆ ಗೊತ್ತಿತ್ತೆಂದು ಹೇಳಿದರು ಶಾಸ್ತ್ರಿಗಳು. ಅಲ್ಲಿಂದ ವಾಪಸು ನಾವು ಅರೆಗತ್ತಲು ಹಾದಿಯಲ್ಲಿ ಗುಡಿಸಿಲಿಗೆ ಸೇರಿದೆವು. ಆಗ ರಾತ್ರಿ ಹನ್ನೊಂದು ಗಂಟೆ. ಶಾಸ್ತ್ರಿಗಳು ಆ ಬಯಲಿನಲ್ಲೇ ಹುಟ್ಟಿ ಬೆಳೆದವರಾದ್ದರಿಂದ ಯಾವ ಭಯವೂ ಇಲ್ಲದೆ ಎಲ್ಲೆಂದರಲ್ಲಿ, ಎಷ್ಟು ಹೊತ್ತಿನಲ್ಲಾದರೂ ಓಡಾಡುತ್ತಿದ್ದರು.

★★★

ಮುಂದಿನ ದಿನಗಳಲ್ಲಿ ಸಿರಿಯಜ್ಜಿಯನ್ನು ಭೇಟಿ ಮಾಡಿ ಸಿರಿಯಣ್ಣನ ಹಾಡು ಪೂರ್ಣವಾಗಿ ಕೇಳಿದ್ದಲ್ಲದೆ ಮುಂದೆ ಇನ್ನೂ ಯಾವ ಬಗೆಯ ಗೀತೆಗಳು ಬರುತ್ತವೆಂದು ವಿಚಾರಿಸಬೇಕೆನಿಸಿತು. ಒಮ್ಮೆ ಬೆಳಗೆರೆಯ ಕಡೆ ಬಸ್ಸು ಹತ್ತಿ ಅದೇ ರಂಗನಾಥನ ಗುಡಿ ಬಳಿ ಇಳಿದು ಕೃಷ್ಣಶಾಸ್ತ್ರಿಗಳ ತಾವಿಗೆ ಹೋದೆ. ಅವರು ಅಲ್ಲೆಲ್ಲೋ ಪಕ್ಕದ ಗ್ರಾಮಕ್ಕೆ ಹೋಗಿರುವುದಾಗಿ ತಿಳಿಯಿತು. ನಾನೇ ಸಿರಿಯಜ್ಜಿ ಹಟ್ಟಿಯ ಕಡೆ ನಡೆದೆ. ಸಂಜೆಯ ಬೆಳಕು ಇನ್ನು ಚೆನ್ನಾಗಿದ್ದಿತು. ಸಿರಿಯಜ್ಜಿಯ ಕಡೆ ನಾನು ಅಷ್ಟು ಹೊತ್ತಿಗೆ ನಾಲ್ಕೈದು ಬಾರಿ ಹೋಗಿ ಬಂದಿದ್ದೆನಾದ್ದರಿಂದ ಅವಳೊಂದಿಗೆ ಸುಲಭ ಮಾತಿನ ಬಳಕೆ ಬಂದುಬಿಟ್ಟಿತ್ತು.

ಸಿರಿಯಜ್ಜಿಯನ್ನು ಮತ್ತಾವ ಪದ ಬರುವುದೆಂದು ಕೇಳಿದೆ. ಕೊಂಡದ ಕಾಟಮ್ಮನವು ಎಂದಳು. ಸಿರಿಯಜ್ಜಿಗೆ ಹಾಡುವುದು ಮಾತ್ರವಲ್ಲದೆ ತಾನು ಹಾಡುತ್ತಿದ್ದ ಹಾಡಿನ ಹಿನ್ನೆಲೆಮುನ್ನೆಲೆಯ ವಿವರಗಳು ಚೆನ್ನಾಗಿಯೇ ಬರುತ್ತಿದ್ದಿತು. ಯಾವ ಕೊಂಡದ ಕಾಟವ್ವ ಎಂದೆ. ಅದೇ ಕಾಟವ್ವ ಎಂಬುವವಳು ಗಂಡ ತೀರಿಕೊಂಡ ಮೇಲೆ ಬೆಂಕಿಗೆ ಹೋಗಿ ಕೆಂಡಕೊಂಡವಾದ ಕಥೆ ಎಂದಳು. ನಾನು ಆವರೆಗೆ ಚಿತ್ರದುರ್ಗದ ಸುತ್ತಮುತ್ತ ಕಳೆದ ಇನ್ನೂರು, ಮುನ್ನೂರು ವರ್ಷಗಳಲ್ಲಿ ಹೆಣ್ಣು ಮಕ್ಕಳನ್ನು ಆವರಿಸಿಕೊಂಡ ಬೆಂಕಿನೀರಿನ ಕಥೆಯನ್ನು ಅದೆಷ್ಟು ಕೇಳಿದ್ದೆನೋ ಅದಕ್ಕೊಂದು ಹಿನ್ನೆಲೆಯಾಗಿ ಸಿರಿಯಜ್ಜಿಯೇ ಒಂದು ಕಥನ ಹಾಡುವುದಾಗಿ ಹೇಳಿದಾಗ ಕಿವಿಯಲ್ಲಿ ಬಿಸಿಯೇರಿತು. ಸಿರಿಯಣ್ಣನ ಪರಾಕ್ರಮದ ಕಥೆ ಆದಮೇಲೆ, ಬೆಂಕಿಗೆ ಹೋದ ಹೆಣ್ಣುಮಗಳೊಬ್ಬಳ ದುರಂತ ಕಥನವನ್ನು ಸಿರಿಯಜ್ಜಿ ನೆನಪಿಸಿಕೊಳ್ಳುತ್ತಿರುವುದು ಅಸಹಜವೇನಲ್ಲ ಎನಿಸಿತು.

ಕೊಂಡದ ಕಾಟವ್ವನ ಗೀತೆಯ ನಡುಭಾಗದ, ಕಡೆಯ ಭಾಗದ ತ್ರಿಪದಿಗಳನ್ನು ಹಾಡುವಂತೆ ಕೇಳಿದೆ. ಸಿರಿಯಜ್ಜಿಗೆ ಅದೆಂಥ ಅಗಾಧ ನೆನಪಿನ ಶಕ್ತಿ ಇದ್ದಿತೆಂದರೆ ಯಾವ ಕಥನಗೀತೆಯ ಯಾವ ಭಾಗದ ಪದಗಳನ್ನು ಕೇಳಿದರೂ ತಕ್ಷಣವೇ ಹಾಡಿಬಿಡುತ್ತಿದ್ದಳು. ಹಲ ಕೆಲವು ಜನಪದ ಗಾಯಕ, ಗಾಯಕಿಯರಿಗೆ ಒಂದು ಕಡೆಯಿಂದ ಕ್ರಮವಾಗಿ ಹಾಡಿಸಿಕೊಂಡು ಹೋದರೆ ಮಾತ್ರ ಅವರಿಂದ ಪೂರ್ಣಗೀತೆ ಹಾಡಲು ಸಾಧ್ಯ. ಮಧ್ಯ ಮಧ್ಯೆ ಕೇಳಿದರೆ ಅವರಿಗೆ ನೆನಪು ಆರಿ ಹೋದಂತಾಗಿಬಿಡುತ್ತದೆ. ಆದರೆ ಸಿರಿಯಜ್ಜಿ ಯಾವ ತ್ರಿಪದಿಗಳನ್ನು ಎಲ್ಲಿಗೆ ಬೇಕಾದರೂ ನಿಲ್ಲಿಸಿ, ಅದರ ಮುಂದಿನದನ್ನು ಎತ್ತಿಕೊಂಡು ಹಾಡುವ ಅರಿವು ಇದ್ದಿತು. ಅದರಿಂದ ನಾನು ಕಾಟವ್ವ ಕೆಂಡಕೊಂಡಕ್ಕೆ ನಡೆಯುವ ದೃಶ್ಯವು ಹೇಗಿರುವುದೋ ಎಂಬ ಕುತೂಹಲದಲ್ಲಿಯೇ ಅಲ್ಲದೆ, ಇತಿಹಾಸಕಾರರು ಸಹಗಮನವನ್ನು ಶಾಸನ ಮುಖೇನ ದಂತ ಕಥೆಗಳ ಮೂಲಕ ಪ್ರಸ್ತಾಪಿಸಿದ್ದರೋ ಆ ದುರಂತ ಮತ್ತು ಮನದಾಳದ ಸಂಕಟವನ್ನು ಕಾವ್ಯವಾಗಿ ಹಾಡುತ್ತಿರುವಳಲ್ಲ ಅನ್ನಿಸಿ, ಮುಂದಿನ ಪದ ಹಾಡಲು ಕೇಳಿದೆ. ಆಗ ಅವಳು ಕಥನದ ಮಧ್ಯಭಾಗದ ಒಂದೆರಡು ನುಡಿಗಳನ್ನು ಹಾಡಿ ತೋರಿಸಿದಳು.

ಓಡಿಹೋದಾಳೆಂದು ರಾಡುಗಳ ಹಾಕಿಸಿದ<br>
ಓಡಿ ಹೋಗೋರ ಮಗಳಲ್ಲ । ಸಿರಿಗೊಂಡಗೌಡ